# ನಾಂದಿಪದ

# ಪಾತ್ರ ಪ್ರಭಾವ

ರಾಜಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ಸಿನಿಮಾ ಒಂದು ಕಾಲದಲ್ಲಿ ಅನೇಕರನ್ನು ಪ್ರಭಾವಿಸಿತ್ತು. ಆ ಸಿನಿಮಾದ ನಾಯಕ ರಾಜೀವನ ಪಾತ್ರವನ್ನು ಜನರು ಮೆಚ್ಚಿಕೊಂಡಿದ್ದು ಮಾತ್ರವಲ್ಲ, ಆ ಪಾತ್ರದ ಆದರ್ಶವನ್ನು ಅನುಸರಿಸಿದ್ದರು. ಹಳ್ಳಿಗಳಿಂದ ನಗರಕ್ಕೆ ಯುವಕರು ಬರುತ್ತಿದ್ದ ಕಾಲದಲ್ಲಿ ಅನೇಕರನ್ನು ನಗರದಿಂದ ಹಳ್ಳಿಗೆ ಹೋಗಿ ಬೇಸಾಯ ಮಾಡುವಂತೆ ಮಾಡಿತ್ತು ರಾಜ್ ಮಾಡಿದ ಆ ಪಾತ್ರ. ಇದು ಆ ಕಾಲದಲ್ಲಿ ಹಿಮ್ಮುಖ ಚಲನೆಯಂತೆ ಕಂಡರೂ ಆ ಪಾತ್ರದ ಪ್ರಭಾವ ಮಾತ್ರ ಪವಾಡ ಸದೃಶ ರೀತಿಯಲ್ಲಿತ್ತು.

ನಮ್ಮ ದೈನಿಕದಲ್ಲಿ ಇಂತಹ ಪ್ರಭಾವಶಾಲಿ ಪಾತ್ರಗಳನ್ನು ನಾವು ನೋಡುತ್ತ, ಓದುತ್ತ ಇರುತ್ತೇವೆ. ಅಸಂಖ್ಯ ಸಿನಿಮಾಗಳ, ಕಾದಂಬರಿಗಳ, ಕತೆಗಳ ಪಾತ್ರಗಳು ನಮ್ಮೊಳಗೆ ತಮ್ಮ ಅಚ್ಚನ್ನು ತಮ್ಮದೇ ರೀತಿಯಲ್ಲಿ ಒತ್ತಿರುತ್ತವೆ. ಕುವೆಂಪು ಅವರ 'ಹೂವಯ್ಯ', ಮಾಸ್ತಿಯವರ 'ಜೋಗ್ಯೋರ ಅಂಜಪ್ಪ', ಶಿವರಾಮ ಕಾರಂತರ 'ಚೋಮ', ಶಂಕರ ಮೊಕಾಶಿ ಪುಣೇಕರರ 'ಪುರುಕುತ್ಸಾನಿ', ಅನಂತಮೂರ್ತಿ ಅವರ 'ಪ್ರಾಣೇಶಾಚಾರ್ಯ', ಎಂ.ಕೆ. ಇಂದಿರಾರ 'ಸದಾನಂದ', ಲಂಕೇಶರ 'ಸಾವಂತ್ರಿ', ತೇಜಸ್ವಿ ಅವರ 'ಮಂದಣ್ಣ', ಅನುಪಮಾ ನಿರಂಜನರ 'ಮಾಧವಿ', ಯಶವಂತ ಚಿತ್ತಾಲರ 'ನಾಗಪ್ಪ', ಗಿರೀಶ ಕಾರ್ನಾಡರ 'ತುಘಲಕ್', ಗೀತಾ ನಾಗಭೂಷಣರ 'ಕಾಶವ್ವ', ವೈದೇಹಿ ಅವರ 'ಅಮ್ಮಚ್ಚಿ', ಜಯಂತ ಕಾಯ್ಕಿಣಿ ಅವರ 'ದುರ್ಗಿ', ಹೀಗೆ ನಮ್ಮನ್ನು ಕಾಡುವ ಪಾತ್ರಗಳ ಬಿಂಬಗಳು ಅಸಂಖ್ಯ. ಮತ್ತು ನೆನೆದಷ್ಟೂ ಅವು ಮನದಲ್ಲಿ ಸಾಲುಗಟ್ಟುತ್ತಲೇ ಹೋಗುತ್ತವೆ. ಹಾಗೆ ನಮ್ಮನ್ನು ಪ್ರಭಾವಿಸುವ, ಕಾಡುವ, ದುರ್ಬಲ ಕ್ಷಣಗಳಲ್ಲಿ ಸ್ಫೂರ್ತಿ ಕೊಡುವ, ಜೊತೆಗಿದ್ದು ಸಲಹುವ, ಒಳಿತು ಕೆಡಕುಗಳನ್ನು ಮೀರಿದ ಪಾತ್ರಗಳು ಯಾವತ್ತಿಗೂ ನಮ್ಮೊಂದಿಗೆ ಸಹಜೀವನ ನಡೆಸುವ ಜೀವಗಳಾಗಿರುತ್ತವೆ.



ಅಂತಹ ಜೀವಂತ ಪಾತ್ರಗಳು ಕತೆಯೊಂದರ ನಾಯಕ, ನಾಯಕಿಯರೇ ಆಗಬೇಕಿಲ್ಲ. ಹಾಗೆಂದು ಅವು ಸಿನಿಮಾ, ನಾಟಕಗಳಿಂದಲೂ ಬರಬೇಕೆಂದಿಲ್ಲ. ನಮ್ಮ ಸುತ್ತಲಿನ ಜೀವರಾಶಿಗಳಿಂದ ಎಲ್ಲಿಂದ ಬೇಕಾದರೂ ಎದ್ದು ಬರಬಹುದು. ಅವನ್ನು ಗುರುತಿಸುವ ಕಣ್ಣುಗಳು, ಅವಕ್ಕೆ ಸ್ಪಂದಿಸುವ ಅಂತಃಕರಣ ನಮಗಿರಬೇಕಷ್ಟೆ. ಪುಟ್ಟ ಪಾತ್ರವೊಂದು ತನ್ನ ಗುಣವೈಚಿತ್ರ್ಯದಿಂದಲೇ ನಮ್ಮನ್ನು ಬಹಳ ಕಾಲ ಕಾಡಬಲ್ಲದು. ಬದುಕಿನುದ್ದಕ್ಕೂ ನಮ್ಮನ್ನು ಹುರಿದುಂಬಿಸಬಲ್ಲದು. ಮಹಾಭಾರತದ ಕತೆಯಲ್ಲಿ ಅರ್ಜುನ, ಕೃಷ್ಣ, ದುರ್ಯೋಧನರಿಗೆ ಇರುವಷ್ಟು ಪ್ರಾಮುಖ್ಯತೆ ಕರ್ಣನಿಗಿಲ್ಲ. ಆದರೆ, ಕರ್ಣ ತನ್ನ ತಬ್ಬಲಿತನದಿಂದ, ತನ್ನ ಹುಟ್ಟಿನ ಕುರಿತಾದ ಅವಹೇಳನದಿಂದ, ವೀರನಿಗೆ ತಕ್ಕುದಲ್ಲದ ಅಸಹಾಯಕತೆಯಿಂದ, ಬೆಚ್ಚಗಿನ ಸ್ನೇಹದಿಂದ ನಮ್ಮನ್ನು ಬಿಡದೆ ಕಾಡುತ್ತಾನೆ. ಕರ್ಣನ ಸಂಕಟಗಳು ಅವನನ್ನು ನಮ್ಮ ಸನಿಹಕ್ಕೆ ತರುತ್ತವೆ. ಇದು ಮಹಾಕೃತಿಗಿರುವ ಕಾವ್ಯದ ಗುಣ. ಅಂತಹ ಕಾವ್ಯದ ಗುಣವಿರುವ ಕೃತಿಗಳ ಪಾತ್ರಗಳನ್ನು ನಾವು ಬಿಟ್ಟರೂ ನಮ್ಮನ್ನು ಅವು ಕೈಬಿಡುವುದಿಲ್ಲ. ಆದರೆ, ಮಹಾಭಾರತದ ಕತೆಯ ಮಾಂತ್ರಿಕ ಅಂಶಗಳನ್ನು ಹೊಂದಿದ, ತುಸುವಾದರೂ ಕಾವ್ಯದ ಲಕ್ಷಣಗಳಿರುವ ಕೃತಿಗಳು ಕನ್ನಡದಲ್ಲಿ ಇತ್ತೀಚೆಗೆ ಅಪರೂಪವಾಗುತ್ತಿವೆ. ಬದುಕಿನ ಪೂರ್ತಿ ರುಚಿಯನ್ನು ಕೊಡುವ, ಕಾವ್ಯದ ಕಾಂತಿಯ ಪಾತ್ರಗಳು ಮುಂದಿನ ದಿನಗಳಲ್ಲಿ ಕನ್ನಡ ಓದುಗರನ್ನು ಎದುರುಗೊಳ್ಳುವಂತಾಗಲಿ.

**ಸಂದೀಪ ನಾಯಕ**